DAB – 430

ದ್ವಿತೀಯ ಬಿ.ಎ. ಪದವಿ ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2008

ಅಂಚೆ ಮತ್ತು ತೆರಪಿನ ಶಿಕ್ಷಣ

ಐಚ್ಛಿಕ ಕನ್ನಡ ಪತ್ರಿಕೆ – ಯುಕೆ – ೨

ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು

(ಪಠ್ಯಗಳು : ಹರಿಶ್ಚಂದ್ರ ಕಾವ್ಯಸಂಗ್ರಹ, ಆಯ್ದ ಕುವೆಂಪು ಕವನಗಳು ಮತ್ತು ಗೆಲಿಲಿಯೊ)

ಅವಧಿ : 3 ಗಂಟೆಗಳು | ಅಂಕಗಳು : 70

1. ಅ) ಒಂದರ ಭಾವಸ್ವಾರಸ್ಯವನ್ನು ವಿವರಿಸಿ. 5

೧) ಹೆತ್ತತಾಯಂ ಮಾಱೆ ತೊತ್ತಕೊಂಬರೆ ಮೂಗ
ನಿತ್ತು ಕನ್ನಡಿಯಂ ನೋಡುವರೆ ಮಾಣಿಕದೊಡವೆ
ನೊತ್ತೆಯಿಟ್ಟೊಡೆದ ಗಾಜಂ ಹಿಡಿವರೇ ಕೋಪ
ದಿಂ ಸತ್ತು ಮದುವೆಯಹರೆ
ಕತ್ತುರಿಯ ಸುಟ್ಟರಳ ಕುಱುಕುಲನು ಗೆಯ್ವರೇ
ಚಿತ್ತೈಸು ಹೊಲತಿಯರ ನೆರೆದು ನಾಮ್ಮೋಹದಿ
ಪತ್ತೊಂದು ತಲೆವೆರೆಸಿ ನರಕಕ್ಕೆ ಹೋಹನೇ
ಮುನಿನಾಥ ಹೇಳೆಂದನು.

೨) 'ಅರಿವಾಸೆ'ಯೆ ಮಾಯಾ ಬಂಧ
'ಇರು'ವುದೇ ಮುಕ್ತಿಯ ಆನಂದ
ಅರಿವಾಸೆಯ ಬಿಡು ಇರುವಾಸೆಯ ತೊಡು
ಇಂತಹ ಸಮಯದಿ ಇರುವಿಕೆಗಿಂತಲೂ
ಹೆಚ್ಚಿನ ಅರಿವಿಲ್ಲ.

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ : (½×8=4)

ಖಚಿತ, ಕಂಕಾಲ, ಚಾರು, ನಖ, ತೊತ್ತು, ಹೇಮ, ಮುಕುಟ, ಅಸಿ, ಪಂಕಜ, ಎಕ್ಕಟಿ, ಧಾವತಿ, ಮಸಗು.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2×2=4)

೧) ದೇವೇಂದ್ರ

೨) ಶ್ರೀಸಾಮಾನ್ಯನ ದೀಕ್ಷಾಗೀತೆ

೩) ಮಿಸಸ್ ಸಾರ್ತ್ರ್.

SEPTEMBER EXAM 2008

P.T.O.

2. ನಾಲ್ಕಕ್ಕೆ ಸಂದರ್ಭ ಸ್ವಾರಸ್ಯವನ್ನು ವಿವರಿಸಿ. **(3×4=12)**

೧) ಅನುನಯದೊಳೆಲ್ಲವಂ ಕೊಡಬಹುದು ಬಿಸುಡಬಹುದು.

೨) ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತ್ತಿದೆ.

೩) ಹುಲುಹುಳ್ಳಿ ತರಲು ಕಾನನಕೆ ಹೋಗೇಳೆಲವೋ ಚಿಣ್ಣ.

೪) ನದಿಹರಿದಿತ್ತು ಬನ ನಿಂತಿತ್ತು
ಬಾನ್ ನೀಲಿಯ ನಗೆ ಬೀರಿತ್ತು.

೫) ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ.

೬) ಮುಳ್ಳಿಲ್ಲದೆ ಗುಲಾಬಿ ಇಲ್ಲ, ಪಾದ್ರಿಗಳಿಲ್ಲದೆ ರಾಜರಿಲ್ಲ.

೭) ವೈಚಾರಿಕತೆ ಗೆದ್ದಿತು, ಅಂದರೆ ಏನರ್ಥ ವಿಚಾರವಂತರು ಗೆದ್ದರು ಅಂತ.

೮) ಮನುಷ್ಯಮಾತ್ರನಾದೋನಿಗೆ ಸತ್ಯವನ್ನು ನಿರ್ಣಯಿಸೋ ಅಧಿಕಾರ ಇಲ್ಲ.

3. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. **10**

೧) ಚಂದ್ರಮತಿಯ ಪ್ರಲಾಪದ ಸನ್ನಿವೇಶದ ಕರುಣಾರಸದ ಪ್ರತಿಪಾದನೆಯನ್ನು ವಿವರಿಸಿ.

೨) ಹರಿಶ್ಚಂದ್ರನ ವ್ಯಕ್ತಿತ್ವ ಸತ್ಯನಿಷ್ಠೆಯ ಮೂಲಕ ವಿಕಾಸವಾಗುವ ಬಗೆಯನ್ನು ವಿವರಿಸಿ.

ಆ) ಯಾವುದಾದರೂ ಒಂದನ್ನು ಕುರಿತು ಬರೆಯಿರಿ : **5**

೧) ಮೃಗಯಾ ಪ್ರಸಂಗ.

೨) ಗಾನರಾಣಿಯರ ಪ್ರಸಂಗ.

AUGUST SEPTEMBER EXAM 2008

4. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ : **10**

೧) 'ಪ್ರೇತ-ಕ್ಯೂ' ಕವನದ ಆಶಯವನ್ನು ವಿವರಿಸಿ.

೨) 'ಅನಿಕೇತನ' ಕವನದಲ್ಲಿ ವ್ಯಕ್ತವಾಗುವ ಪ್ರಬಲ ಆಕಾಂಕ್ಷೆಯನ್ನು ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ : **5**

೧) 'ಗೊಬ್ಬರ' ಕವನದ ಸ್ವಾರಸ್ಯವನ್ನು ವಿವರಿಸಿ.

೨) 'ದೇವರು ರುಜು ಮಾಡಿದನು' ಕವನದ ವೈಶಿಷ್ಟ್ಯಗಳೇನು ? ವಿವರಿಸಿ.

5. ಅ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ : **10**

೧) 'ಜ್ಞಾನವಿರುವುದು ಸತ್ಯಶೋಧನೆಗಾಗಿ ಎಂಬ ಆಶಯ ಗೆಲಿಲಿಯೋ ನಾಟಕದ್ದು' ಈ ಹೇಳಿಕೆಯನ್ನು ವಿವರಿಸಿ.

೨) ಮತಾಂಧ ಚರ್ಚನ್ನು ಗೆಲಿಲಿಯೋ ಎದುರಿಸಿದ ಬಗೆಯನ್ನು ವಿವರಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. **5**

೧) ಅಂದ್ರಿಯಾ ವ್ಯಕ್ತಿತ್ವವನ್ನು ಚಿತ್ರಿಸಿ.

೨) ಗೆಲಿಲಿಯೋ ನಾಟಕದಲ್ಲಿ ಪ್ಲೇಗ್ ಪ್ರಸಂಗ.

---